ಅನುಬಂಧ

(ಲಕ್ಷ ರೂ.ಗಳಲ್ಲಿ)

ಕ್ರಮ ಸಂಖ್ಯೆ	ಯೋಜನೆಯ ಹೆಸರು	2001-02 ನೇ ಸಾಲಿನಲ್ಲಿ		ಪ್ರತಿ ಗ್ರಾಮ ಪಂಚಾಯಿತಿಗೆ	
		ಹಂಚಿಕೆ	ಬಿಡುಗಡೆ	ಹಂಚಿಕೆ	ಬಿಡುಗಡೆ
1.	ಶಾಸನಬದ್ಧ ಅನುದಾನ	11318	7680	2.00	1.36
2.	ಅಭಿವೃದ್ಧಿ ಅನುದಾನ	8489	6064	1.5	1.07
3.	ಸಂಪೂರ್ಣ ಗ್ರಾಮೀಣ ರೋಜ್‌ಗಾರ್ ಯೋಜನೆ				
	ನಗದು	8788	9986	1.55	1.76
	ಧಾನ್ಯ (89500 ಟನ್ಸ್)	5594	5595	0.99	0.99
4.	ಹನ್ನೊಂದನೇ ಹಣಕಾಸು ಯೋಜನೆ	5288	5288	0.94	0.94
	ಒಟ್ಟು	39477	34612	6.98	6.12

ಸರ್ಕಾರದಿಂದ ಮೇಲ್ಕಂಡಂತೆ ಗ್ರಾಮ ಪಂಚಾಯಿತಿಗಳಿಗೆ ಬಿಡುಗಡೆಯಾಗುವ ಹಣದೊಂದಿಗೆ ಅವರದೇ ಆದ ಸಂಪನ್ಮೂಲವೂ ಸಹ ಗ್ರಾಮ ಪಂಚಾಯಿತಿಗಳಿಗೆ ಲಭ್ಯವಿರುತ್ತದೆ 2001-02 ನೇ ಸಾಲಿನಲ್ಲಿ ಗ್ರಾಮ ಪಂಚಾಯಿತಿಗಳು ಒಟ್ಟು ರೂ. 5294 ಲಕ್ಷ ಹಣವನ್ನು ವಸೂಲಿ ಮಾಡಿದ್ದು ಈ ಹಣವು ಸಹ ಗ್ರಾಮ ಪಂಚಾಯಿತಿಗಳ ಉಪಯೋಗಕ್ಕೆ ಲಭ್ಯವಿರುತ್ತದೆ.

ಕೊಪ್ಪಳದಲ್ಲಿ ಸರ್ಕಾರದ ಪ್ರಥಮ ದರ್ಜೆ ಕಾಲೇಜು ಪ್ರಾರಂಭಿಸುವುದು

486(452) - ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ) : ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಪ್ಪಳ ನಗರದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾರಂಭಿಸುವ ಯೋಜನೆ ಸರ್ಕಾರದ ಮುಂದೆ ಇದೆಯೇ;

ಆ) ಹಾಗಿದ್ದಲ್ಲಿ ವಿಳಂಬಕ್ಕೆ ಕಾರಣವೇನು;

ಇ) ಪ್ರಥಮ ದರ್ಜೆ ಕಾಲೇಜನ್ನು 2002-03ನೇ ಸಾಲಿನಲ್ಲಿ ಪ್ರಾರಂಭಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೇ?

ಡಾ. ಜಿ. ಪರಮೇಶ್ವರ (ಉನ್ನತ ಶಿಕ್ಷಣ ಸಚಿವರು): ಅ) ದಿನಾಂಕ 28-06-2002 ಸಂಖ್ಯೆ : ಇಡಿ 110 ಯುಆರ್‌ಸಿ 2002 ಸರ್ಕಾರಿ ಆದೇಶದಲ್ಲಿ ಕೊಪ್ಪಳದಲ್ಲಿ ಸರ್ಕಾರಿ ಕಾಲೇಜನ್ನು ಸ್ಥಾಪಿಸಲಾಗಿದೆ.

ಆ) - ಅದೇ - ”

ಇ) - ಅದೇ - ”

ಮಧ್ಯಾಹ್ನದ ಬಿಸಿ ಊಟದ ಯೋಜನೆ

487(559) - ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ) : ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಬಿಸಿ ಊಟ ಯೋಜನೆ ಎಷ್ಟು ಜಿಲ್ಲೆಯಲ್ಲಿ ಅಸ್ತಿತ್ವದಲ್ಲಿದೆ?

ಆ) ಜಾರಿಯಲ್ಲಿದ್ದರೆ ಎಷ್ಟು ಶಾಲೆಗಳಲ್ಲಿ ಯೋಜನೆ ಪ್ರಾರಂಭಿಸಲಾಗಿದೆ?

ಇ) ಪ್ರಾರಂಭವಿದ್ದರೆ, ಇದರ ಉಸ್ತುವಾರಿಯನ್ನು ಯಾರು ನೋಡಿಕೊಳ್ಳುತ್ತಿದ್ದಾರೆ ಮತ್ತು ಗುಣಮಟ್ಟದ ಅಡಿಗೆಯನ್ನು ಪೂರೈಸಲಾಗುತ್ತಿದೆಯೆ?

ಈ) ಈ ಯೋಜನೆ ನಿರಂತರ ಯೋಜನೆಯೇ ಅಥವಾ ತಾತ್ಕಾಲಿಕ ಯೋಜನೆ ಆಗಿದ್ದಲ್ಲಿ ಈ ಯೋಜನೆಯ ಪ್ರಗತಿ ವಿವರ ನೀಡುವುದು.

ಉ) ಇಲ್ಲಿಯವರೆಗೆ ಈ ಬಿಸಿ ಊಟದ ಯೋಜನೆಗೆ ತಗುಲಿದ ಅಂದಾಜು ವೆಚ್ಚ ಎಷ್ಟು; ಜಿಲ್ಲಾವಾರು ಪ್ರತ್ಯೇಕವಾದ ವಿವರವನ್ನು ನೀಡುವುದು?

ಪ್ರೊ.ಬಿ.ಕೆ. ಚಂದ್ರಶೇಖರ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು):

ಅ) ಈ ಯೋಜನೆ ಈಶಾನ್ಯ ವಲಯದ ಹಿಂದುಳಿದ 07 ಜಿಲ್ಲೆಗಳಲ್ಲಿನ ಪ್ರಾಥಮಿಕ 1 ರಿಂದ 5ನೇ ತರಗತಿ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಬಿಸಿ ಊಟ ಅಸ್ತಿತ್ವದಲ್ಲಿದೆ. ಪ್ರೌಢ ಶಾಲೆಗಳಲ್ಲಿ ಬಿಸಿ ಊಟ ಯೋಜನೆ ಅಸ್ತಿತ್ವದಲ್ಲಿ ಇರುವುದಿಲ್ಲ.

ಆ) 8996 ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಪ್ರಾರಂಭಿಸಲಾಗಿದೆ.

ಇ) ಈ ಯೋಜನೆಯ ಉಸ್ತುವಾರಿಯನ್ನು ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಆಹಾರ ಇಲಾಖೆಯ ಜಿಲ್ಲಾ ಉಪನಿರ್ದೇಶಕರು ಹಾಗೂ ತಹಸೀಲ್ದಾರರು, ಸಾರ್ವಜನಿಕ ಶಿಕ್ಷಣ ಇಲಾಖೆಯ ಜಿಲ್ಲಾ ಉಪ ನಿರ್ದೇಶಕರು ಹಾಗೂ ತಾಲ್ಲೂಕುಮಟ್ಟದ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಗ್ರಾಮ ಪಂಚಾಯಿತಿ ನಗರಪಾಲಿಕೆಗಳು, ಶಾಲಾ ಅಭಿವೃದ್ಧಿ ಮತ್ತು ಉಸ್ತುವಾರಿ ಸಮಿತಿಯವರು ನೋಡಿಕೊಳ್ಳುತ್ತಿದ್ದಾರೆ. ಉತ್ತಮ ಗುಣಮಟ್ಟದ ಅಡಿಗೆಯನ್ನು ಪೂರೈಸಲಾಗುತ್ತಿದೆ.

ಈ) ಈ ಯೋಜನೆಯು ನಿರಂತರ ಯೋಜನೆ. ಇದರ ಪ್ರಗತಿಯ ವಿವರ ಈ ರೀತಿ ಇದೆ.

1. 2001-02 ರಲ್ಲಿ ಒಟ್ಟು ರೂ. 15.00 ಕೋಟಿಗಳನ್ನು ಬಿಡುಗಡೆ ಮಾಡಿದ್ದು ಇದರಲ್ಲಿ ರೂ. 5.84, 69,383 ಗಳು ಖರ್ಚಾಗಿರುತ್ತದೆ. ಉಳಿಕೆ ಹಣ ಬಳಸಿಕೊಳ್ಳಲಾಗುವುದು.
2. 2002-03ರಲ್ಲಿ 7 ಜಿಲ್ಲೆಗಳಿಗೆ ರೂ. 44.62 ಕೋಟಿಗಳನ್ನು ಬಿಡುಗಡೆ ಮಾಡಿದ್ದು ಇದರಲ್ಲಿ 1/3 ಭಾಗ ದಷ್ಟು ವೆಚ್ಚ ಮಾಡಲು ಅನುಮತಿ ನೀಡಿದೆ. ಈ ಯೋಜನೆ ಇನ್ನು ಪ್ರಾರಂಭಿಕ ಹಂತದಲ್ಲಿರುವುದರಿಂದ ವೆಚ್ಚದ ವಿವರ ತಿಳಿದು ಬಂದಿಲ್ಲ.